ಮೈಸೂರು ನಗರದ ಕುಡಿಯುವ ನೀರಿನ ಸಮಸ್ಯೆ

57 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿರುವುದು ನಿಜವೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಮೈಸೂರು ನಗರಕ್ಕೆ ಕಳೆದ 5 ವರ್ಷಗಳಲ್ಲಿ ಯಾವುದಾದರೂ ಶಾಶ್ವತ ಕುಡಿಯುವ ನೀರಿನ ಯೋಜನೆ ಕಾರ್ಯರೂಪಕ್ಕೆ ಬಂದಿದೆಯೇ?

ಇ) ಕಾವೇರಿ 3ನೇ ಯೋಜನೆ 6 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕಾರಣವೇನು? ಯೋಜನೆ ಎಂದು ಪ್ರಾರಂಭವಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮೈಸೂರು ನಗರದಲ್ಲಿನ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿದೆ. ಕೆಲವು ಪ್ರದೇಶಗಳಿಗೆ ಕೊಳವೆ ಬಾವಿಗಳಿಂದ ನೀರನ್ನು ಒದಗಿಸುತ್ತಿದ್ದು ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿರುದರಿಂದ ಮತ್ತು ವಿದ್ಯುತ್ ತೊಂದರೆಯಿಂದಾಗಿ ನೀರು ಸರಬರಾಜಿನ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿರುತ್ತದೆ. ಇಂತಹ ಪ್ರದೇಶಗಳನ್ನು ಗುರುತಿಸಿ ಅಲ್ಲಲ್ಲಿ ಹೆಚ್ಚು ಕೊಳವೆ ಬಾವಿಗಳನ್ನು ಕೊರೆದು ಹೆಚ್ಚು ಇಳುವರಿ ಇರುವ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಿ ನೀರಿನ ಪ್ರಮಾಣವನ್ನು ಸರಿದೂಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಹಾಲಿ ಇರುವ ನಗರ ಪ್ರದೇಶಕ್ಕೆ ಶಾಶ್ವತ ನೀರು ಸರಬರಾಜು ಸಮಸ್ಯೆ ಪರಿಹಾರಕ್ಕೆ ಈಗಾಗಲೇ ಪ್ರಗತಿಯಲ್ಲಿರುವ 650.00 ಲಕ್ಷ ರೂ.ಗಳ ಅಂದಾಜು ಹಾಗೂ 170 ಲಕ್ಷ ರೂ.ಗಳ ಅಂದಾಜು ವೆಚ್ಚದ ಕಾಮಗಾರಿಗಳನ್ನು ತ್ವರಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಮೈಸೂರು ನಗರಕ್ಕೆ ಕುಡಿಯುವ ನೀರಿನ ಸಮಗ್ರ ಅಭಿವೃದ್ಧಿಗಾಗಿ 1990ರಲ್ಲಿ ರೂ. 6.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಗರದ ವಿತರಣಾ ಸವ್ಯವಸ್ಥೆಯನ್ನು ನವೀಕರಣಗೊಳಿಸುವುದು ಮತ್ತು ಹೆಚ್ಚುವರಿ ಜಲ ಸಂಗ್ರಹಣಾಗಾರಗಳನ್ನು ನಿರ್ಮಿಸುವುದು ಹಾಗೂ 8 ಎಂಜಿಡಿ ನೀರನ್ನು ಹೆಚ್ಚುವರಿಯಾಗಿ ಬೆಳಗೊಳದಿಂದ ಒದಗಿಸುವುದು, ಇದರ ಜೊತೆ ಹಾಲಿಕಾವೇರಿ ಮೂರನೇ ಹಂತದ ಯೋಜನೆಯಡಿಯಲ್ಲಿ ಬೂಸ್ಟರ್ ಯಂತ್ರಗಾರವನ್ನು ಅಳವಡಿಸುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಬೂಸ್ಟರ್ ಯಂತ್ರಾಗಾರರ ಕೆಲಸ ಮುಗಿದಿದ್ದು ಯಂತ್ರಾಗಾರ ಚಾಲನೆಯಲ್ಲಿದೆ. ಇದರಿಂದ ನಗರಕ್ಕೆ ಪ್ರತಿದಿನ 3 ಎಂಜಿಡಿ ಹೆಚ್ಚುವರಿ ನೀರು ಸರಬರಾಜಾಗುತ್ತಿದೆ ಹಾಗೂ ಉಳಿದ ಎಲ್ಲಾ ಇತರೆ ಕಾಮಗಾರಿಗಳು ಪ್ರಗತಿಯಲ್ಲಿದ್ದು ಯೋಜನೆಯನ್ನು ಜೂನ್ 1997ರೊಳಗೆ ಮುಗಿಸಲು ಉದ್ದೇಶಿಸಿದೆ.

ಇ) ಕಾವೇರಿ 4ನೇ ಹಂತದ ಯೋಜನೆಗೆ 19.81 ಕೋಟಿಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದ್ದು, ಇದನ್ನು ಏಷ್ಯ ಅಭಿವೃದ್ಧಿ ಬ್ಯಾಂಕ್‌ನ ನೀತಿ ನಿಯಮಗಳಂತೆ ಹಾಲಿ ದರಪಟ್ಟಿಗೆ ರೂ. 31.53 ಕೋಟಿಗಳಿಗೆ ಪರಿಷ್ಕರಿಸಿ ಧನ ಸಹಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಹಣಕಾಸು ವ್ಯವಸ್ಥೆ ಒದಗಿ ಬಂದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು.